**ಎರಡನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**
**ಸಿಸಿ ನಂ. 8489/2021**

ಪಿ ಡಬ್ಲ್ಯೂ : 03
ಸಿ ಡಬ್ಲ್ಯೂ : 01

ಸಾಕ್ಷಿದಾರರ ಹೆಸರು : ಬಸವರಾಜು
ತಂದೆಯ/ಗಂಡನ ಹೆಸರು : ದಾಸೇಗೌಡ
ವಯಸ್ಸು : 34 ವರ್ಷ
ಉದ್ಯೋಗ : ಸರ್ಕಾರಿ ನೌಕರ
ವಾಸ ಸ್ಥಳ : ತುಮಕೂರು

**ದಿನಾಂಕ : 21.04.2026 ರಂದು ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ: ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾದಲ್ಲಿ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಪ್ರಸ್ತುತ ಕಳೆದ ಮೂರು ತಿಂಗಳಿನಿಂದ ತುಮಕೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು 2017 ರಿಂದ 2022 ರವರೆಗೆ ಸೋಮನಹಳ್ಳಿ ಶಾಖೆಯಲ್ಲಿ ಟೆಕ್ನಿಷಿಯನ್ ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ದಿನಾಂಕ 17.01.2021 ರಂದು ಬೆಳಿಗ್ಗೆ 11.30 ರ ಸಮಯದಲ್ಲಿ ನನ್ನನ್ನು ಚಾಸಾ 3 ಮತ್ತು 4 ಮತ್ತು ಚಾಲಕ ಶಿವು ಅವರನ್ನು ನಮ್ಮ ಮೇಲಧಿಕಾರಿಗಳು ಧರ್ಮಾಪುರಿಯಿಂದ ಸೋಮನಹಳ್ಳಿ ಪವರ್ ಗ್ರಿಡ್‌ಗೆ ಹೋಗುವ ಲೈನಿನ ತಟ್ಟಗುಪ್ಪೆ ಗ್ರಾಮದ ಸರ್ವೇ ನಂಬರ್ 24/1 ರ ಜಮೀನಿನಲ್ಲಿ ಅರಳೀಮರದ ಕೊಂಬೆಗಳು ಪವರ್ ಗ್ರಿಡ್ ಲೈನ್‌ಗೆ ತಾಗದಂತೆ ಕಟಾವು ಮಾಡಲು ಕಳುಹಿಸಿದ್ದರು. ಆ ದಿನ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಾವು ಆ ಕಟಾವು ಕೆಲಸ ಮಾಡುತ್ತಿದ್ದಾಗ 1 ನೇ ಆರೋಪಿಯು ಅಲ್ಲಿಗೆ ಬಂದು ಕೆಟ್ಟ ಕೆಟ್ಟದಾಗಿ ನಮಗೆ ಬೈದರು. ಮರದ ಮೇಲ್ಭಾಗದ ಕೊಂಬೆ ಕಡಿಯುತ್ತಿದ್ದ ಚಾಸಾ 3 ರವರ ಮೇಲೆ 1 ನೇ ಆರೋಪಿಯು ಕಲ್ಲನ್ನು ತೂರಾಟ ಮಾಡಿರುತ್ತಾರೆ. ಆಗ ಸ್ಥಳದಲ್ಲಿದ್ದ 2 ನೇ ಆರೋಪಿಯು ಕೂಡ ಅವರ ಜೊತೆ ಸೇರಿಕೊಂಡು ನಮಗೆ ಕೆಟ್ಟದಾಗಿ ಬೈದರು. ನಮ್ಮ ಬಳಿ ಇದ್ದ ಕತ್ತಿಗಳನ್ನು ಕಸಿದುಕೊಂಡು 1 ನೇ ಆರೋಪಿಯು ನನಗೆ ಕೆಟ್ಟದಾಗಿ ಬೈದು, ನನ್ನ ಎದೆಗೆ ಗುದ್ದಿ ಕೈಗಳಿಂದ ಹೊಡೆದಿರುತ್ತಾರೆ. ನಾನು ಆಯಾತಪ್ಪಿ ಕೆಳಗೆ ಬಿದ್ದೆ. ಆ ಸಮಯದಲ್ಲಿ ನೆಲದ ಮೇಲೆ ಬಿದ್ದಾಗ ಆ ಹಿಂದೆ ಅಪಘಾತದಲ್ಲಿ ನನಗಾದ ಬಲಗಾಲಿನ ಮೂಳೆ ಮುರಿತದ ಗಾಯದ ಬಗ್ಗೆ ಅಳವಡಿಸಿದ್ದ ಜಾಗಕ್ಕೆ ನೋವುಂಟಾಗಿತ್ತು. ನಂತರ ನನ್ನ ಲೇಬರ್ ಗಳನ್ನು ಕರೆದುಕೊಂಡು ಅಲ್ಲಿಂದ ಹೋದೆವು. ನಮ್ಮ ಸಂಸ್ಥೆಯಿಂದ ಆರೋಪಿಗಳ ಮರಕ್ಕೆ ಸಂಬಂಧಪಟ್ಟಂತೆ ಕಟಾವು ಮಾಡುವ ಬಗ್ಗೆ ಪರಿಹಾರ ಹಣವನ್ನು ಕೊಟ್ಟಿಲ್ಲ ಎಂದು ಆರೋಪಿಗಳು ನಮ್ಮ ಜೊತೆ ಜಗಳ ಮಾಡಿದ್ದರು. ಆರೋಪಿಗಳ ಕೃತ್ಯದಿಂದ ನಮ್ಮ ಕೆಲಸವನ್ನು ಅರ್ಧಕ್ಕೆ ಬಿಟ್ಟು ವಾಪಸ್ಸಾದೆವು. ಮನೆಗೆ ಹೋದ ನಂತರ ನನ್ನ ಬಲಗಾಲಿಗೆ ನೋವು ತುಂಬಾ ಕಾಣಿಸಿದ್ದರಿಂದ ದಿನಾಂಕ 18.01.2022

ರಂದು ಬನ್ನೇರುಘಟ್ಟದ ಅಪೋಲೋ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ. ಅಲ್ಲಿ ವೈದ್ಯರಾದ ಶಶಿಕುಮಾರ್ ರವರು ಸ್ಕ್ಯಾನ್ ಮಾಡಿ ನನ್ನನ್ನು ಒಳರೋಗಿಯಾಗಿ ದಾಖಲಿಸಿಕೊಂಡು ಶಸ್ತ್ರ ಚಿಕಿತ್ಸೆಯನ್ನು ಮಾಡಿ ನನ್ನ ಕಾಲಿಗೆ ಅಳವಡಿಸಿದ್ದ ರಾಡ್ ಮತ್ತು ಸ್ಕ್ರೂ ಅನ್ನು ಬದಲಾಯಿಸಿದರು. ಆ ಸಮಯದಲ್ಲಿ ನಾನು 9 ದಿನಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ದಿನಾಂಕ 21.01.2022 ರಂದು ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡರು. ದೂರು ಕೊಟ್ಟ ನಂತರ ಸುಮಾರು 15 ದಿನಗಳ ಬಳಿಕ ಪೊಲೀಸರು ಘಟನಾ ಸ್ಥಳದಲ್ಲಿ ಮಹಜರ್ ಅನ್ನು ಜರುಗಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದೂರು ಹೇಳಿಕೆಯನ್ನು ನಿಪಿ 3 ಎಂದು, ಮಹಜರ್ ಅನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3 ಎ ಮತ್ತು 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ಗೈರು ಹಾಜರಾಗಿದ್ದು ಗೈರು ವಿನಾಯಿತಿ ಅರ್ಜಿಯಲ್ಲಿ ಸಲ್ಲಿಸಲಾಗಿದೆ. ಆರೋಪಿಗಳಿಗೆ ಸಂಬಂಧಪಟ್ಟ ಮರಗಳಿಗೆ ಘಟನೆಗಳಿಗಿಂತ ಮುಂಚಿತವಾಗಿ ಪರಿಹಾರದ ಹಣವನ್ನು ಪಾವತಿಸಲಾಗಿದ್ದರೂ ಕೂಡ ಆರೋಪಿಗಳು ನಮ್ಮ ಜೊತೆ ಜಗಳ ಮಾಡಿದ್ದರು.

ಪಾಟೀ **ಸವಾಲು: ಆರೋಪಿಗಳ ಪರ ವಕೀಲರು ಕಾಲಾವಕಾಶ ಕೋರಿರುತ್ತಾರೆ. ಭಾ.ದಂ.ಪ್ರ.ಸಂ.ಕಲಂ 309 ಕ್ಕೆ ಅನುಗುಣವಾಗಿ ಸಕಾರಣಗಳು ಇಲ್ಲದ ಕಾರಣ ವಕೀಲರ ಕೋರಿಕೆಯನ್ನು ತಿರಸ್ಕರಿಸಿ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಎರಡನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.